ಮಂತ್ರಿಗಳು ಮೂಡಾ ಸಭೆಗೆ ಬಂದಾಗ ವಿನಂತಿ ಮಾಡಿದ್ದು, ರಾಜ್ಯ ಸರ್ಕಾರ 7 ಪುಣ್ಯ ಕ್ಷೇತ್ರಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿರುವುದರಿಂದ ಉಳ್ಳಾಲ್ ಸಯ್ಯದೆ ಮದನಿ ದುರ್ಗಾವು ದಕ್ಷಿಣ ಭಾರತದ ಅಜ್ಮೀರ್ ಕ್ಷೇತ್ರ ಎಂದು ಹೆಸರಾಗಿದೆ. ಆದ್ದರಿಂದ ಪುಣ್ಯ ಕ್ಷೇತ್ರಗಳಲ್ಲಿ ಇದನ್ನು ತೆಗೆದುಕೊಂಡು ಉಳ್ಳಾಲ್ ನಗರ ಪಂಚಾಯಿತಿಗೆ ತಾವು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ಉಳ್ಳಾಲ್‌ಗೆ ಒಳಚರಂಡಿ ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ನಾನು ವಿನಂತಿಸಿಕೊಳ್ಳುತ್ತೇನೆ.

+ ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಮತ್ತು ಕಂದಾಯ ಇಲಾಖೆ):- ಅಧ್ಯಕ್ಷರೇ, ಉಳ್ಳಾಲ್ ಪಂಚಾಯತಿಯನ್ನು, ಉಳ್ಳಾಲ್ ಮತ್ತು ಪರಮನೂರು ಪಂಚಾಯತಿಯನ್ನು ಸೇರಿಸಿ 1992 ರಲ್ಲಿ ಉಳ್ಳಾಲ ಟೌನ್ ಪಂಚಾಯಿತಿ ಸ್ಥಾಪನೆ ಮಾಡಲಾಯಿತು. ಉಳ್ಳಾಲ್ ಪಟ್ಟಣವು ಮಂಗಳೂರಿನಿಂದ 8 ಕಿ.ಮೀ ದೂರದಲ್ಲಿರುತ್ತದೆ. ಉಳ್ಳಾಲ್ ಪಟ್ಟಣದ ಜನಸಂಖ್ಯೆ 1991ರ ಜನಗಣತಿ ಪ್ರಕಾರ 45 ಸಾವಿರ ಆಗಿರುತ್ತದೆ. ಅಲ್ಲಿ ನೀರು ಸರಬರಾಜು ವ್ಯವಸ್ಥೆಯನ್ನು ಕೊಳವೆಭಾವಿ ಮೂಲಕ ಹಾಗೂ ತೆರೆದ ಭಾವಿ ಮೂಲಕ ಮಾಡಲಾಗುತ್ತಿದೆ. ಈ ಪಟ್ಟಣದಲ್ಲಿ ಸುಮಾರು 16 ಕೊಳವೆ ಭಾವಿಗಳು ಇವೆ.

ಈ ಕೊಳವೆ ಭಾವಿಗಳಿಗೆ ಕೈಪಂಪು ಮತ್ತು ಸಬ್‌ಮರ್ಸಿಬಲ್ ಪಂಪ್ ಸೆಟ್ ಗಳನ್ನು ಜೋಡಿಸಲಾಗಿದೆ. ಹಾಲಿ ಜನಸಂಖ್ಯೆಗೆ ದಿನಂಪ್ರತಿ 30 ಲೀಟರ್‌ನಷ್ಟು ನೀರು ಸರಬರಾಜು ಮಾಡಲಾಗುತ್ತಿದೆ.

ಉಳ್ಳಾಲ ಪಟ್ಟಣದ ಜನಸಂಖ್ಯೆಯು 2006ನೇ ಇಸವಿಗೆ 65,000 ಆಗಬಹುದೆಂದು ಹಾಗೂ 2021ನೇ ಇಸವಿಗೆ 1,00,000 ಜನಸಂಖ್ಯೆ ಆಗಬಹುದೆಂದು ಅಂದಾಜು ಮಾಡಲಾಗಿದ್ದು ಈ ಜನಸಂಖ್ಯೆಗೆ 3 ದಶಲಕ್ಷ ಗ್ಯಾಲನ್ ನೀರು ಬೇಕಾಗುತ್ತದೆ.

ಏಷಿಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನಿಂದ ವೆಸ್ಟ್‌ಕೋಸ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಅಡಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮಾಡಲು ಉದ್ದೇಶಿಸಿರುವ ಸುಮಾರು 15 ಪಟ್ಟಣಗಳ ಪೈಕಿ ಉಳ್ಳಾಲ ಪಟ್ಟಣವೂ ಸೇರಿರುತ್ತದೆ.

ಉಳ್ಳಾಲ ಪಟ್ಟಣವು ಮಂಗಳೂರಿಗೆ ಬಹಳ ಸಮೀಪವಿದ್ದು ಬೃಹತ್ ಮಂಗಳೂರು ಮಾಸ್ಟರ್ ಪ್ಲಾನ್ ಅಡಿಯಲ್ಲಿ ಈ ಪಟ್ಟಣವೂ ಸೇರಿರುತ್ತದೆ. ಬೃಹತ್ ಮಂಗಳೂರು ನಗರಕ್ಕೆ ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ ಸಹಾಯದಲ್ಲಿ ಒಂದು ಯೋಜನೆಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಗಳಿಗೆ ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವನ್ನು ಪಡೆದು ಯೋಜನೆಗಳನ್ನು ಕಾರ್ಯಗತಗೊಳಿಸಿದಾಗ ಉಳ್ಳಾಲ ಪಟ್ಟಣಕ್ಕೂ ಸಮರ್ಪಕ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯು ದೊರಕುತ್ತದೆ.

(ಉ) ಗುಲ್ಬರ್ಗದಲ್ಲಿ ಹೋಮ್‌ಗಾರ್ಡ್ ಕಮಾಂಡೆಂಟ್ ರವರನ್ನು ವರ್ಗಾವಣೆ ಮಾಡಿರುವ ಬಗ್ಗೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾದಲ್ಲಿ ಹೋಂಗಾರ್ಡ್ ಕಮಾಂಡೆಂಟ್ ಪೋಸ್ಟ್ ಒಂದು ಇದೆ. ಬಹಳ ವರ್ಷಗಳಿಂದ ಅಲ್ಲಿನ ಅಲ್ಲಿನ ಹೋಮಿ ಇರಾನಿ ಎಂದು ಅದರ ಪ್ರೆಸಿಡೆಂಟ್ ಮತ್ತು ಕಮಾಂಡೆಂಟ್. ಅವರು ಸಾಕಷ್ಟು ಸೇವೆಯನ್ನು ಈ ಹೋಂಗಾರ್ಡ್ ಇಲಾಖೆಗೆ ಸಲ್ಲಿಸಿದ್ದಾರೆ. ಅವರು ಅದನ್ನು ಬಹಳ ನಿಷ್‌ಪಕ್ಷಪಾತವಾಗಿ ಮತ್ತು ದಕ್ಷತೆಯಿಂದ ನಿರ್ವಹಿಸಿಕೊಂಡು ಬಂದಿದ್ದರು. ಆದರೆ ಈಗ ಯಾವುದೇ ಕಾರಣಗಳಿಲ್ಲದೆ ತರಾತುರಿಯಲ್ಲಿ ಮಂತ್ರಿಗಳು ಅವರನ್ನು ತೆಗೆದು ದೇವರಗುಡ್ಡ ಎನ್ನುವವರಿಗೆ ಅವರ ಸ್ಥಾನಕ್ಕೆ ನೇಮಕ ಮಾಡಿದ್ದಾರೆ. ಹೀಗೆ ಅಪಾಯಿಂಟ್‌ಮೆಂಟ್ ಮಾಡಲೂ ಕೂಡ ಹೋಂ ಡಿಪಾರ್ಟ್‌ಮೆಂಟಿನಲ್ಲಿ ಯಾರೂ ಕೂಡ ರೆಕಮೆಂಡ್ ಮಾಡಿಲ್ಲ. ಸಂಬಂಧಪಟ್ಟ ಹೋಂ ಗಾರ್ಡ್ ಡಿಸಿಪಿ ಯವರು ಏನಿದ್ದಾರೆ ಅವರೂ ಕೂಡ ಇದಕ್ಕೆ ಸಂಪೂರ್ಣವಾಗಿ ವಿರೋಧ ಮಾಡಿದ್ದಾರೆ. ದೇವರುಗುಡ್ಡನ್ನು ಗ್ರಾ ಜುಯೇಟ್ ಅಲ್ಲ, ಅವನ ಹೆಸರೂ ಕೂಡ ಒಳ್ಳೆಯದಾಗಿಲ್ಲ, ಹೋಂಗಾರ್ಡ್ ಇಲಾಖೆಯಲ್ಲಿ ಈಗಾಗಲೇ ಆತನು ಸಾಕಷ್ಟು ಹೆಸರನ್ನು ಕೆಡಿಸಿಕೊಂಡಿದ್ದಾನೆ. ಆದ್ದರಿಂದ ಆತನನ್ನು ನೀವು ನೇಮಕ ಮಾಡಬಾರದು ಎಂದು ಅವರು ಹೇಳಿದ್ದರೂ ಕೂಡ ಮಂತ್ರಿಗಳು ನೇರವಾಗಿ ಸಂಬಂಧಪಟ್ಟ ಫೈಲ್‌ಗಳನ್ನು ತರಿಸಿ ಆದೇಶವನ್ನು ಕೂಡ ಅವರ ಕೈಯಲ್ಲಿಯೇ ಕೊಟ್ಟು ನೀವು ಹೋಗಿ ಜಾಯಿನ್ ಆಗಿ ಎಂದು ಹೇಳಿ ಕಳುಹಿಸಿ ಶನಿವಾರ ದಿನವೇ ಜಾಯಿನ್ ಮಾಡಿಸಿ ಇವೊತ್ತು ಬಾಗಿಲನ್ನು ಮುರಿದು ಬೀಗ ತೆರೆದು ಇವರು ಕೆಲಸ ಮಾಡತಕ್ಕಂಥ ವ್ಯವಸ್ಥೆಯು ಇವೊತ್ತು ಅಲ್ಲಿ ಆಗಿದೆ. ನೀವು ಒಂದು ಕಡೆ ರೂಲ್ ಅಫಲಾ ಇರಬೇಕು, ರೂಲ್ಸಾ ಪ್ರಕಾರ ಕಾಲ್‌ಫಾರ್ ಮಾಡಬೇಕು, ಇನ್ನೊಂದು ಕಡೆಯಲ್ಲಿ ನೀವು ಯಾವ ರೂಲ್ಸ್‌ನ್ನೂ ಫಾಲೋ ಮಾಡದೇ, ಇಲಾಖೆಯವರ ರೆಕಮಂಡೇಷನ್ಸ್ ಇಲ್ಲದೆ, ಆ ಡಿಜಿಪಿ ಯವರಿಗೂ ಗೊತ್ತಿಲ್ಲದೆ ನೇರವಾಗಿ ನೀವೇ ಅಪಾಯಿಟ್‌ಮೆಂಟ್ ಮಾಡಿ, ಆರ್ಡರ್‌ನ್ನು ಕೂಡ ಅವರ ಕೈಯಲ್ಲಿಯೇ ಕೊಟ್ಟು ನೀವು ಹೋಲಿ ಜಾಯಿನ್ ಆಗಿ ಬಂದು ನನಗೆ ಹೇಳು, ಅಂದರೆ-ಇದರಿಂದ ಎಷ್ಟರಮಟ್ಟಿಗೆ ನಿಮ್ಮ ಆಡಳಿತ ನಡೆಯುತ್ತಿದೆ ಎಂದು ಗೊತ್ತಾಗುತ್ತದೆ. ಹುಚ್ಚಿಯ ಲಗ್ನದಲ್ಲಿ ಉಂಡವನೇ ಜಾಣ ಅಂದ ಹಾಗೆ ಯಾರ ಕೈಗೆ ಏನು ಸಿಗುತ್ತದೋ ಅದನ್ನು ಮಾಡುವುದು ಎಂದು ಅರ್ಥವಾಗುತ್ತದೆ. ಶ್ರೀ ಹೋಮಿ ಇರಾನಿಯವರು ಇಲ್ಲಿಯ ಹೋಂಗಾರ್ಡ್ ಇಲಾಖೆಯಿಂದ ಒಂದು ರೂಪಾಯಿಯನ್ನು ಕೂಡ ಡ್ರಾ ಮಾಡಿಲ್ಲ. ಅವರೊಬ್ಬ ಸೋಷಿಯಲ್ ವರ್ಕರ್, ಗೋಲ್ಡ್ ಮೆಡಲಿಸ್ಟ್, ಇಂಜನಿಯರ್, ಮತ್ತು ತನ್ನ ಸ್ವಂತ ಹಣವನ್ನು ಖರ್ಚು ಮಾಡಿ ಕೆಲಸ ಮಾಡತಕ್ಕಂಥ ಮನುಷ್ಯ. ಅವರಿಗೆ ಇದೊಂದು ಹವ್ಯಾಸ. ಇರಾನೀಸ್ ಅಂದರೆ ಅವರು ಟಾಟಾ, ಬಿರ್ಲಾ, ರಂಥ ದೊಡ್ಡ ದೊಡ್ಡ ಕಂಪನಿಗಳನ್ನು ಹೊಂದಿರುವ ಕಮ್ಯುನಿಟಿಯವರು. ಅನೇಕ ಸಾಕಿ ತನ್ನ ವತಿಯಿಂದ ಮತ್ತು ತನ್ನ ಕಂಪನಿ ವತಿಯಿಂದ ಹೋಂಗಾರ್ಡ್ ರವರಿಗೆ ಯುನಿಫಾರ್ಮ್ ಕೊಡತಕ್ಕಂಥ, ಇಲಾಖೆಯಲ್ಲಿ ದುಡ್ಡು ಇಲ್ಲದಿದ್ದರೂ ಭತ್ಯೆ ಇತ್ಯಾದಿಗಳನ್ನು ಕೊಡತಕ್ಕಂಥದ್ದು, ಬೇರೆ ಸಹಾಯವನ್ನು ಮಾಡತಕ್ಕಂಥಾದ್ದು ಮುಂತಾಗಿ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಇದೊಂದು ಹವ್ಯಾಸ ಮಾತ್ರ. ಅಂಥ ಒಬ್ಬ ನಿಷ್ಪಕ್ಷಪಾತವಾಗಿ ಕೆಲಸ ಮಾಡತಕ್ಕಂಥವರಿಗೆ ತೆಗೆದು, ಟೆಲಿಫೋನ್ ಕಟ್ ಮಾಡಿ, ತಕ್ಷಣವೇ ಇವರಿಗೆ ಕಳುಹಿಸಿ, ಅರ್ಹತೆ ಇಲ್ಲ ಎಂದು ಹೇಳಿ, ಡಿಜಿಪಿ ಬರೆದರೂ ಕೂಡ, ದೇವರಗುಡ್ಡ ಅವರಿಗೆ ನೇಮಕ ಮಾಡಬೇಕೆಂದು ಹೇಳಿ ಅಪಾಯಿಂಟ್ ಮಾಡಿದ್ದು ನಿಜವಾಗಿಯೂ

ಸರಿಯಾಗಿಲ್ಲ, ಹೀಗೆ ಮಾಡಿದ್ದನ್ನು ತತ್‌ಕ್ಷಣ ವಿಥ್‌ಡ್ರಾ ಮಾಡಿಕೊಳ್ಳಬೇಕು, ಇದು ಇಲ್‌ಲೀಗಲ್ ಆಗಿರುವುದನ್ನು ರೆಸ್ಪೋರ್ ಮಾಡುತ್ತೇನೆ ಅಂದರೆ ನನ್ನ ಅಡಿ ಇಲ್ಲ. ಈಗ ಮಾನ್ಯ ಮುಖ್ಯಮಂತ್ರಿಯವರೂ ಇದ್ದಾರೆ, ಸಂಬಂಧಪಟ್ಟ ಸಚಿವರು ಇಲ್ಲ. ಇದು ಡಿಪಾರ್ಟ್‌ಮೆಂಟ್ ರೆಕಮೆಂಡ್ ಮಾಡದೆ ಮತ್ತು ಅರ್ಹತೆ ಇಲ್ಲದೆ ಅವನಿಗೆ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ, ಇದನ್ನು ನಾವು ಸರಿಪಡಿಸುತ್ತೇವೆ ಅಂದರೆ ನನ್ನದೇನೂ ಅಬ್‌ಜಕ್ಷನ್ ಇಲ್ಲ. ಹೋಮಿ ಇರಾನಿಯವರು ಈ ಸಂಸ್ಥೆಯಲ್ಲಿ ಕಮಾಂಡೆಂಟ್ ಆಗಿ ಒಳ್ಳೆಯ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಎಲ್ಲಾ ಸರಕಾರದವರು ಕೂಡ ಇವರ ಸೇವೆಯನ್ನು ನೋಡಿ ಮುಂದುವರೆಸಿಕೊಂಡು ಬಂದಿದ್ದಾರೆ. ಈಗ ದೇವರಗುಡ್ಡ ಎನ್ನುವಂಥ ಒಬ್ಬ ಗ್ರಾ ಜುಯೇಟ್ ಕೂಡ ಅಲ್ಲದ, ಅರ್ಹತೆಯೂ ಇಲ್ಲದ, ವ್ಯಕ್ತಿಯನ್ನು ಹೋಮಿ ಇರಾನಿ ಯವರ ಜಾಗದಲ್ಲಿ ನೇಮಕ ಮಾಡಿ ಮಂತ್ರಿಯವರು ಆರ್ಡರ್ ಕಳುಹಿಸಿದ್ದಾರೆ. ಜಾಯಿನ್ ಆಗು ಆ ಮೇಲೆ ನೋಡೋಣ ಎಂದು ಹೇಳಿದ್ದಾರೆ. ಈ ಖಾತೆಯು ಮಾನ್ಯ ಸಚಿವರಾದ ಸೋಮಣ್ಣನವರಿಗೆ ಬರುತ್ತದೆ. ಮುಖ್ಯಮಂತ್ರಿಯವರು ಈಗ ವಿಷಯ ಕೇಳಿದ್ದಕ್ಕೆ ಪುನಃ ವಿವರಿಸಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್:– ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಪ್ರಕಾರ ಅಲ್ಲಿ ತಪ್ಪಾಗಿದ್ದರೆ ಅದನ್ನು ನಾನು ಸರಿಪಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಏಕೆಂದರೆ ಅಲ್ಲಿನ ಹೋಂಗಾರ್ಡ್ ನವರು ಹೋಳಿ ಹುಣ್ಣಿಮೆಯ ಈ ಸಂದರ್ಭದಲ್ಲಿ ಸ್ಟ್ರೈಕ್ ಮೇಲೆ ಹೋಗುತ್ತಿದ್ದಾರೆ.

ಅಧ್ಯಕ್ಷರು:– ಹಾಗೆ ಸ್ಟ್ರೈಕ್ ಮಾಡುವುದು ಬೇಡ. ನೀವು ಅವರಿಗೆ ಸ್ಟ್ರೈಕ್ ಮಾಡದ ಹಾಗೆ ಅಪೀಲ್ ಮಾಡಿಕೊಳ್ಳಿ. ವಿಥ್‌ಡ್ರಾ ಮಾಡಿಕೊಳ್ಳಲು ಹೇಳಿ. ಮುಖ್ಯಮಂತ್ರಿಯವರು ಕಾಗದಪತ್ರಗಳನ್ನು ತರಿಸಿ ನೋಡಲಿ....

ಶ್ರೀ ಜೆ.ಹೆಚ್. ಪಟೇಲ್:– ಕಾಗದ ಪತ್ರಗಳನ್ನು ತರಿಸಿ ಸರಿಪಡಿಸುತ್ತೇವೆ.

(ಊ) ಬೆಂಗಳೂರು ಮಹಾನಗರ ಪಾಲಿಕೆಯಿಂದ ಅಭಿವೃದ್ಧಿ ಶುಲ್ಕ ಪಾವತಿ.

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ):– ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರ ಹಾಗೂ ಇತರ ಕಡೆ ರೆವಿನ್ಯೂ ನಿವೇಶನದಾರರ ಹತ್ತಿರ ಅಭಿವೃದ್ಧಿ ಶುಲ್ಕ ಪಾವತಿ ಮಾಡಲಿಕ್ಕೆ ಹಿಂದೆ ಚದುರ ಗಜ ಒಂದಕ್ಕೆ 200 ರೂ. ಗಳು ಇತ್ತು. ಅದನ್ನು ಜನರ ಅಭಿಪ್ರಾಯ ಪಡೆದು 100 ರೂ.ಗಳಿಗೆ ಇಳಿಸಿದ್ದರು. ಬೆಂಗಳೂರು ನಗರದಲ್ಲಿಯೇ ಸುಮಾರು ಒಂದು ಲಕ್ಷ ಜನರು ಈ ರೀತಿಯ ರೆವಿನ್ಯೂ ನಿವೇಶನದಾರರು ಇದ್ದಾರೆ. ಇದುವರೆವಿಗೂ 13-3-98ರ ಪ್ರಕಾರ ಸುಮಾರು 15 ಸಾವಿರ ಜನರು ಮಾತ್ರ ಬಂದು ಖಾತಾ ನೊಂದಣಿ ಮಾಡಿಕೊಂಡಿದ್ದಾರೆ. ಇದಕ್ಕೆ ಎರಡು ಕಾರಣಗಳಿವೆ. ನಗರ ಪಾಲಿಕೆಯಲ್ಲಿ ವ್ಯಾಪಾಕವಾಗಿರುವ ಭ್ರಷ್ಟಾಚಾರ. ಖಾತಾ ನೊಂದಾವಣಿಗೆ ಅಧಿಕೃತ ಶುಲ್ಕ 10 ಸಾವಿರ ರೂ. ಗಳು ಇದ್ದರೆ, ಅವರ ಹತ್ತಿರ ಕಾರ್ಪೊರೇಷನ್ನಿನವರು 15 ಸಾವಿರ ರೂ.ಗಳನ್ನು ಎಕ್ಸ್‌ಟ್ರಾ ತೆಗೆದುಕೊಳ್ಳುತ್ತಾ ಇದ್ದಾರೆ. ಅಂದರೆ ಕಾರ್ಪೊರೇಷನ್‌ಗೆ ಬರುವ ಆದಾಯಕ್ಕಿಂತ ಕಾರ್ಪೊರೇಷನ್‌ನ ಅಧಿಕಾರಿಗಳ ಆದಾಯ ಹೆಚ್ಚಿಗೆ ಇದೆ. ಜೊತೆಗೆ ಜನವರಿ ತಿಂಗಳಿಂದ ಮೊನ್ನೆಯವರೆಗೂ ಪಾರ್ಲಿಮೆಂಟ್ ಚುನಾವಣೆ